## ಭಾಗ 1:

# ನರಾವತಾರದ ಮೊದಲು

ಭೂಲೋಕದ ಮೇಲಿನ ಯೇಸುವಿನ ಸೇವೆಯ ಮಾತುಗಳಲ್ಲಿ ಆತನ ಬಗ್ಗೆ ಯೋಚಿಸುವ ಧೋರಣೆ ಇರುತ್ತದೆ. ಗಬ್ರಿಯೇಲ ದೇವದೂತನ ಪ್ರಕಟಣೆಯು ಈ ಗಂಡುಮಗುವು ಸಾಮಾನ್ಯ ಜನನದ್ದಲ್ಲವೆಂಬುದನ್ನು ಜ್ಞಾಪಕಕ್ಕೆ ತರುತ್ತದೆ. ಆತನ ಜನನವು ದೇವರ ಮೆಸ್ಸೀಯನು ಬಂದಿದ್ದಾನೆ ಎಂಬ ಶುಭ ವಾರ್ತೆಯೊಂದಿಗೆ ಇತ್ತು. ಅದು ದೇವರಿಗೆ ಸ್ತೋತ್ರ ಹೇಳುವ ಮತ್ತು ಮಹಿಮೆಪಡಿಸುವ ಸಂದರ್ಭವಾಗಿತ್ತು. ಆತನ ಜನನದ ಸುತ್ತಲೂ ಇದ್ದ ಎಲ್ಲಾ ವಿವರಗಳು ಮನಸ್ಸಿಗೆ ಬರುತ್ತವೆ.

ಪಂಡಿತರು ತಮಗಿಂತಲೂ ಹೆಚ್ಚು ಜ್ಞಾನಿಯಾದಾತನಿಗೆ ಗೌರವ ಸಮರ್ಪಿಸಿದ ಸಮಯವದಾಗಿತ್ತು. ಆತನ ಬಾಲ್ಯಪ್ರಾಯದ ಒಂದು ನೋಟವು ದೇವಾಲಯದಲ್ಲಿ ತನ್ನ ಪ್ರಶ್ನೆ ಹಾಗೂ ಉತ್ತರಗಳೊಂದಿಗೆ ಯೆಹೂದಿ ಪಂಡಿತರನ್ನು ಆತನು ಆಶ್ಚರ್ಯಗೊಳಿಸಿದ ಜ್ಞಾನವನ್ನು ನಮಗೆ ಪ್ರಕಟಿಸುತ್ತದೆ. ಬಾಲ್ಯದಿಂದ ಪ್ರಾಯಸ್ಥನಾಗುವವರೆಗಿನ ಆತನ ಮಾನವ ಬೆಳವಣಿಗೆಯ ಬಗೆಗಿನ ಸಂಕ್ಷೇಪವಾದ ಒಂದು ಹೇಳಿಕೆಯು ದೇವರೊಂದಿಗೂ ಮಾನವರೊಂದಿಗೂ ಇದ್ದ ಆತನ ಜ್ಞಾನವನ್ನು ಒತ್ತಿಹೇಳುತ್ತದೆ.[1]

ಯೇಸುವಿನ ಜ್ಞಾನದ ಮೇಲಿನ ಈ ಒತ್ತಡವು ಒಳಗೊಂಡಿರುವಂಥದ್ದರ ಮೇಲೆ ನಾವು ಎಂದಾದರೂ ಯೋಚಿಸಿದ್ದೇವೆಯೋ? ಆತನು ತನ್ನ ವೈಯಕ್ತಿಕ ಸೇವೆಯ ಪ್ರಾರಂಭದಲ್ಲಿ ತನ್ನ ಬಾಪ್ತಿಸ್ಮವು "ಎಲ್ಲಾ ನೀತಿಯನ್ನು ನೆರವೇರಿಸುವಂಥದ್ದು ಆಗಿದೆ" ಎಂಬ ಆತನ ಹೇಳಿಕೆಯ ಅಂತರ್ ದೃಷ್ಟಿಯನ್ನು ಗುರುತಿಸಿರುವೆವೋ? ಸೈತಾನನು ಮಾಡಿದ ಎಲ್ಲಾ ಶೋಧನೆಗಳನ್ನು ಸಹಿಸಿಕೊಳ್ಳುವ ಆತನ ವಿಧಾನ ಹಾಗೂ ಬಲವು ಆತನ ಅದ್ಭುತಕರವಾದ ಜ್ಞಾನ ಮತ್ತು ದೇವರ ವಾಕ್ಯದ ತಕ್ಷಣದ ಉಪಯೋಗವಾಗಿತ್ತೆಂಬುದನ್ನು ನಾವು ಗಮನಿಸಿರುವೆವೋ? ಯೇಸುವಿನ "ಪರ್ವತ ಪ್ರಸಂಗದಲ್ಲಿ" ಪ್ರದರ್ಶಿಸಲ್ಪಟ್ಟ ಆತನ ಉನ್ನತ ಜ್ಞಾನವು - ಮಾನವ ಸಾಮರ್ಥ್ಯಕ್ಕಿಂತ ಮಿಗಿಲಾದ ಜ್ಞಾನವು - ನಿಮ್ಮನ್ನು ಆಶ್ಚರ್ಯಗೊಳಿಸುವುದೋ? ಹೌದು, ಹಾಗೇ ಆಗಿದೆ! ಯೇಸುವಿನ ಜ್ಞಾನವು ಆತನ ಪ್ರತಿಯೊಂದು ಮಾತಿನಲ್ಲಿ, ಕಾರ್ಯದಲ್ಲಿ ಹಾಗೂ ಮನೋಭಾವನೆಯಲ್ಲಿ ಪ್ರಕಾಶಿಸುತ್ತದೆ.

ಯೇಸುವಿನ ಜ್ಞಾನದ ಪ್ರದರ್ಶನವು ಅನಿವಾರ್ಯವಾದದ್ದಾಗಿತ್ತು. ಬೆಂಕಿಯು ಬಿಸಿಯಾಗದೇ ಉಳಿಯುವುದೋ? ದೇವರು ಜ್ಞಾನಿಯಾಗುವದರಿಂದ ನಿಲ್ಲಿಸಲ್ಪಡುವನೋ? ಈ ಪ್ರಶ್ನೆಗಳ ಉತ್ತರವು "ಇಲ್ಲ" ಎಂದೇ ಆಗುತ್ತದೆ. ಹಸಿಯಾಗಿರುವುದು ನೀರಿನ, ಬಿಸಿಯಾಗಿಸುವುದು ಬೆಂಕಿಯ ಸ್ವಭಾವವಾಗಿದೆ. ಜ್ಞಾನಿಯಾಗಿರುವುದು ದೇವರ ಸ್ವಭಾವವಾಗಿದೆ. ಎಲ್ಲಾ ನಿತ್ಯತ್ವದಲ್ಲಿಯೂ ಸಮಯದಲ್ಲಿಯೂ ದೇವರು ಎಂದೂ ಹುಚ್ಚುತನದ ಕಾರ್ಯಮಾಡಿಲ್ಲ ಹಾಗೂ ಹುಚ್ಚುತನದ ಮಾತು ಹೇಳಿರುವದಿಲ್ಲ.

ತ್ರಿತ್ವ ದೇವರ ನಮ್ಮ ಅಧ್ಯಯನವನ್ನು ನಾವು ಮುಂದುವರಿಸುವಂತೆ, ಕುಮಾರನಾದ ದೇವರು - ಯೇಸುವು ನಮ್ಮ ಲೋಕದೊಳಗೆ ತನ್ನ ಜನನಕ್ಕಿಂತ ಮೊದಲು ಸಹ ತಂದೆಯ ಜ್ಞಾನವನ್ನೂ ಬಲವನ್ನೂ ಹೇಗೆ ಪ್ರದರ್ಶಿಸಿದನು ಎಂಬುದನ್ನು ನೋಡುತ್ತೇವೆ.

---

**ಟಿಪ್ಪಣಿ**

[1]ಯೇಸುವಿನ ಜೀವನವನ್ನು ಕುರಿತಾದ ಹೇಳಿಕೆಗಳಿಗಾಗಿ ಇವು ಉಲ್ಲೇಖಗಳು: ಮತ್ತಾಯ 2:1, 2, 11; 3:13-15; 4:1-11; ಲೂಕ 1:19; 2:11, 13, 14, 42-47, 49, 52.

© 2009 Truth for Today